ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ –590–002
ZILLA PANCHAYAT OFFICE, BELAGAVI

ದೂರವಾಣಿ / Tele phone: 0831–2407201, 0831-2407206, 0831-2407213
ಫ್ಯಾಕ್ಸ: 0831–2429662
E-Mail: ceo_zp_bgm@nic.in, ceozpbelgaum@yahoo.com

ನಂ.ಜಿಪ/ಅಭಿವೃದ್ದಿ/ಗ್ರಾಪಂ/ವಿವ. /14–15 ದಿನಾಂಕ: 17–01–2015

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ ಬೆಳಗಾವಿ / ಖಾನಾಪೂರ/
ಸವದತ್ತಿ/ರಾಮದುರ್ಗ/ಬೈಲಹೊಂಗಲ/ಅಥಣಿ/ಚಿಕ್ಕೋಡಿ/ಹುಕ್ಕೇರಿ
ಗೋಕಾಕ/ರಾಯಬಾಗ ಇವರಿಗೆ.

ವಿಷಯ : ಕರ ವಸೂಲಾತಿಯ ಮಾಸಾಚರಣೆಯಲ್ಲಿ ವಸೂಲಿಯಾದ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡುವ ಕುರಿತು.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 16–01–2015 ರಿಂದ ನಮ್ಮ ಆಸ್ತಿ ನಮ್ಮ ತೆರಿಗೆ ಕಾರ್ಯಕ್ರಮ ಪ್ರಾರಂಭಿಸಿರುವುದು ಸರಿಯಷ್ಟೆ. ಈ ಮಾಸಾಚರಣೆಯಲ್ಲಿ ವಸೂಲು ಮಾಡಲಾಗುವ ಕರ ವಸೂಲಿ ರಶೀದಿ ಪುಸಕ್ತಗಳನ್ನು ಕಡ್ಡಾಯವಾಗಿ ಅವುಗಳಿಗೆ ನಂಬರಿಂಗ್ ಮಾಡಿ ಸ್ಟಾಕ್ ರಜಿಸ್ಟರದಲ್ಲಿ ಇವುಗಳನ್ನು ತೆಗೆದುಕೊಂಡು ತದನಂತರ ವಸೂಲಿ ಮಾಸಾಚರಣಯಲ್ಲಿ ಉಪಯೋಗಿಸತಕ್ಕದ್ದು. ಮುಂದುವರೆಯುತ್ತಾ ಮಾಸಾಚರಣೆಯಲ್ಲಿ ವಸೂಲಿ ಮಾಡುವ ಕರ ವಸೂಲಿ ಮೊತ್ತವನ್ನು ಅಂದೇ ಆ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಸಮೀಪದ ಬ್ಯಾಂಕಿಗೆ ಭರಣಾ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ಬೃಹತ ಮೊತ್ತವನ್ನು ಗ್ರಾಮ ಪಂಚಾಯತಯಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ. ಹಾಗೂ ದುರುಪಯೋಗಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಕರ್ನಾಟಕ ಆರ್ಥಿಕ ಸಂಹಿತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಒಂದು ವೇಳೆ ವಸೂಲಿ ಮಾಡಲಾದ ಗ್ರಾಮ ಪಂಚಾಯತಿ ಸ್ಥಳದಲ್ಲಿ ಯಾವುದೇ ಬ್ಯಾಂಕುಗಳು ಇಲ್ಲದೇ ಇದ್ದಲ್ಲಿ ಮರು ದಿನ ವಸೂಲಿ ಮಾಡಲಾದ ಮೊತ್ತವನ್ನು ಜಮೆ ಮಾಡುವುದು.

ಗ್ರಾಮ ಪಂಚಾಯತಿಯ ನೋಡಲ್ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿದಾಗ ವಸೂಲಿ ಮಾಡಿದ ರಶೀದಿ ಪುಸಕ್ತಗಳ ಮೇಲೆ ರ್‍ಯಾಂಡಮ್ ಪರಿಶೀಲನೆ ಮಾಡುವುದು ಮತ್ತು ಸ್ಟಾಕ್‌ರಜಿಸ್ಟರ್‌ದಲ್ಲಿ ನೋಡಲ್ ಅಧಿಕಾರಿಗಳು ರುಜು ಮಾಡತಕ್ಕದ್ದು. ತಾಲೂಕ ಪಂಚಾಯತಿಯವರು ಪ್ರತಿ ದಿನ ಗ್ರಾಮ ಪಂಚಾಯತಿಯಲ್ಲಿ ಕರ ವಸೂಲಿ ಮಾಡಲಾದ ಮೊತ್ತವನ್ನು ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಅಂದೇ ಮಾಹಿತಿ ಒದಗಿಸುವುದು. ಹಾಗೂ ಪ್ರತಿವಾರ ವಸೂಲಿ ಮಾಡಲಾದ ಒಟ್ಟು ಮೊತ್ತದ ವಿವರವನ್ನು ವಾರದ ಕೊನೆಯಲ್ಲಿ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಸಲ್ಲಿಸುವುದು. ಮತ್ತು ಕರ ವಸೂಲಾತಿ ಮೊತ್ತದಲ್ಲಿ ಸರ್ಕಾರದ ನಿಯಮಾವಳಿಗಳ ಪ್ರಕಾರ ಉಪಕರಗಳನ್ನು ತುಂಬಿದ ಬಗ್ಗೆ ಖಚಿತ ಪಡಿಸಕೊಳ್ಳತಕ್ಕದ್ದು. ಹಾಗೂ ಪ್ರತಿದಿನ ಕರವಸೂಲಾತಿ ಮಾಡಿದ ಬಗ್ಗೆ ಮಾಹಿತಿಯನ್ನು ಪಂಚತಂತ್ರಾಂಶದಲ್ಲಿ ದಾಖಲಿಸತಕ್ಕದ್ದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಬೆಳಗಾವಿ

Acer-kara vasulati masacharane.docx